# ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.39/2024

## ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಚಂದ್ರಶೇಖರ್ ಹೆಚ್. ವೈ | CW: 6 | PW: 4 |
| ತಂದೆಯ ಹೆಸರು | : | ಯಶೋಧರಪ್ಪ | | |
| ವಯಸ್ಸು | : | 39 | | |
| ವೃತ್ತಿ | : | ಪಿಸಿ, ನ್ಯಾಮತಿ ಪೊಲೀಸ್ ಠಾಣೆ | | |
| ವಾಸಸ್ಥಳ | : | ಹೊನ್ನಾಳಿ | | |

ದಿನಾಂಕಃ 13.03.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

## ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ-

ನಾನು 5 ವರ್ಷಗಳಿಂದ ಇಲ್ಲಿಯವರೆಗೆ ನ್ಯಾಮತಿ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 05.07.2023 ರಂದು ಮಧ್ಯಾಹ್ನ 1 ಗಂಟೆ ಸಮಯದಲ್ಲಿ ನಾನು, ಚಾಸಾ 1, 4 ಮತ್ತು 5 ರವರು ಠಾಣೆಯಲ್ಲಿದ್ದಾಗ ಚಾಸಾ 7 ರವರು ನಮ್ಮನ್ನು ಕರೆದು ಸಾಲಬಾಳು ಕ್ರಾಸ್ ಬಳಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಚಾಸಾ 1 ರವರಿಗೆ ಬಾತ್ಮೀದಾರರಿಂದ ಮಾಹಿತಿ ಬಂದಿದ್ದು ಚಾಸಾ 1 ರವರಿಂದ ದೂರು ಪಡೆದುಕೊಂಡು ಪ್ರಕರಣ ದಾಖಲಿಸಿ ನಮ್ಮನ್ನು ದಾಳಿಗೆ ಕರೆದಿರುತ್ತಾರೆ.

ನಂತರ ಚಾಸಾ 7 ರವರು ಚಾಸಾ 1 ರವರಿಗೆ ಪಂಚರನ್ನಾಗಿ ಕರೆದುಕೊಂಡು ಬರುವಂತೆ ಹೇಳಿದ ಮೇರೆಗೆ ಚಾಸಾ 1 ರವರು ಚಾಸಾ 2 ಮತ್ತು 3 ರವರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಿದ್ದು ಚಾಸಾ 7 ರವರು ಅವರಿಗೆ ದಾಳಿಯ ಮಾಹಿತಿ ನೀಡಿ ಪಂಚರಾಗಿ ಸಹಕರಿಸುವಂತೇ ಕೇಳಿಕೊಂಡಿದ್ದು ಅದಕ್ಕೆ ಅವರು ಒಪ್ಪಿಕೊಂಡ ಮೇರೆಗೆ ನಾನು, ಚಾಸಾ 1, 4 ಮತ್ತು 5 ಮತ್ತು ಪಂಚರು ಮಧ್ಯಾಹ್ನ 1.00 ಗಂಟೆಯಲ್ಲಿ ಠಾಣೆಯನ್ನು ಬಿಟ್ಟು ಇಲಾಖಾ ಜೀಪಿನಲ್ಲಿ ಸಾಲಬಾಳು ಕ್ರಾಸ್ ಗೆ ಹೋಗಿ ಸ್ವಲ್ಪ ಮರೆಯಲ್ಲಿ ನಿಂತು ನೋಡಲಾಗಿ ಸಾಲಬಾಳು ಕ್ರಾಸ್ ನ ಪೆಟ್ಟಿಗೆ ಅಂಗಡಿ ಮುಂಭಾಗ ಒಬ್ಬ ಆಸಾಮಿಯು ಚೀಲದಲ್ಲಿ ಮಧ್ಯದ ಪೌಚ್ ಗಳನ್ನು ಮಾರಾಟ ಮಾಡುತ್ತಿದ್ದು ಕಂಡು ಬಂದು, ನಾವು ಎಲ್ಲರೂ ಸುತ್ತುವರೆದು ದಾಳಿ ಮಾಡಿದಾಗ ಸದರಿ ಆಸಾಮಿಯು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದು ಹಿಡಿದುಕೊಂಡು ಹೆಸರು, ವಿಳಾಸ ಕೇಳಲಾಗಿ ಆತನ ಹೆಸರು ರಮೇಶ್ ನಾಯ್ಕ ತಂದೆ ಯಂಕ್ಯಾನಾಯ್ಕ, 45 ವರ್ಷ, ಸಾಲಬಾಳು ಗ್ರಾಮ ಎಂದು ತಿಳಿಸಿರುತ್ತಾನೆ.

ಪಂಚರ ಸಮಕ್ಷಮ ಬ್ಯಾಗ್ ನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ ಎಲ್ ನ 31 ಹೈವರ್ಡ್ಸ್ ಚಿಯರ್ಸ್ ವಿಸ್ಕಿ ಪೌಚ್ ಗಳು ಇದ್ದವು. ರಾಸಾಯನಿಕ ವಿಶ್ಲೇಷಣಾ ಪರೀಕ್ಷೆಗಾಗಿ ಎಲ್ಲಾ ಪೌಚ್ ಗಳನ್ನು ಪಂಚರ ಸಮಕ್ಷಮ ಚೀಲದಲ್ಲಿ ಹಾಕಿ ಎನ್ ಎಂ ಟಿ ಎಂದು ಸೀಲು ಮಾಡಿ ಪಂಚರ ಸಹಿಯನ್ನು ಅಂಟಿಸಿ ಮಾಲು ಮತ್ತು ಆರೋಪಿಯೊಂದಿಗೆ ಠಾಣೆಗೆ ಹೋಗಿರುತ್ತೇವೆ ಪಂಚನಾಮೆಯನ್ನು ಮಧ್ಯಾಹ್ನ 2 ರಿಂದ 2.45 ಗಂಟೆ ಸಮಯದಲ್ಲಿ ಮಾಡಿರುತ್ತೇವೆ. ಪಂಚನಾಮೆಯ ಸಮಯದಲ್ಲಿ ಪೋಟೋ ತೆಗೆದಿರುತ್ತೇವೆ. ಈ ಸಂಬಂಧ ನಾನು ಮೇಲಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ. ಈ ಸಂಬಂಧ ನಾನು 65 ಬಿ ಪ್ರಮಾಣ ಪತ್ರ ನೀಡಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಹಾಗೂ ಮು.ಮಾ 1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ 1 ಪೋಟೋದಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ 3 ಮಹಜರ್ ನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು,

ಸಾಕ್ಷಿಯ ಸಹಿಯನ್ನು ನಿಪಿ 3(ಸಿ) ಎಂದು ಗುರುತಿಸಲಾಯಿತು. 65 ಬಿ ಪ್ರಮಾಣ ಪತ್ರವನ್ನು ನಿಪಿ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು :- ಆರೋಪಿ ಪರ ಶ್ರೀ.ಎಸ್ ಎಂ ಬಿ ವಕೀಲರರಿಂದ :-

ದಿಃ 05.07.2023 ರಂದು ನಾವು ಆರೋಪಿಯ ಮೇಲೆ ದಾಳಿ ಮಾಡುವ ಮುನ್ನ ಬೇರೆ ಯಾವ ಯಾವ ಜಾಗಗಳಲ್ಲಿ ಯಾವ ಯಾವ ಸಮಯದಲ್ಲಿ ದಾಳಿ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಠಾಣೆಯಿಂದ ನೇರವಾಗಿ ದಾಳಿಗೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಘಟನಾ ಸ್ಥಳಕ್ಕೆ ಯಾವ ಸಮಯಕ್ಕೆ ಹೋಗಿರುತ್ತೇವೆ ಎಂದರೆ ಸಾಕ್ಷಿ ಮಧ್ಯಾಹ್ನ 1.45 ಕ್ಕೆ ಎಂದು ನುಡಿಯುತ್ತಾರೆ. ಪಂಚರಾದ ಚಾಸಾ 2 ಮತ್ತು 3 ರವರನ್ನು ಎಲ್ಲಿ ಬರಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಠಾಣಾ ಆವರಣದಲ್ಲೇ ಇದ್ದರೂ ಅಲ್ಲಿಂದಲೇ ಕರೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಪಂಚರು ಯಾವ ಸಮಯಕ್ಕೆ ಪೋಲೀಸ್ ಠಾಣೆಗೆ ಬಂದಿರುತ್ತಾರೆ ಎಂದರೆ ಸಾಕ್ಷಿ ಮಧ್ಯಾಹ್ನ 1.25 ಎಂದು ನುಡಿಯುತ್ತಾರೆ. ಮು.ಮಾ 1 ರೀತಿಯ ಮುದ್ದೆ ಮಾಲುಗಳು ಬೇರೆ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ನಾವು ದಾಳಿ ಮಾಡಿದಾಗ ಆರೋಪಿ ನಮ್ಮನ್ನು ನೋಡಿ ತಪ್ಪಿಸಿಕೊಳ್ಳಲು ಪ್ರಯತ್ನ ಪಟ್ಟನು ಎಂದು ಸುಳ್ಳು ಹೇಳಿರುತ್ತೇನೆಂದರೆ ಸರಿಯಲ್ಲ. ಸದರಿ ದಿನಾಂಕದಂದು ನಾವು ಯಾವುದೇ ದಾಳಿ ಮಾಡಿಲ್ಲ , ಸ್ಥಳ ಪಂಚನಾಮೆ ಮಾಡಿಲ್ಲ, ನಿಪಿ 2 ರಂತೆ ಪೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ನಿಪಿ 2 ನ್ನು ಈ ಪ್ರಕರಣಕ್ಕೂ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಸ್ಥಳ ಪಂಚನಾಮೆಗೆ ಪಂಚರ ಸಹಿಗಳನ್ನು ಠಾಣೆಯಲ್ಲೇ ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಇಲಾಖಾ ಪ್ರಕರಣಗಳನ್ನು ಹೆಚ್ಚಿಸಲು ಆರೋಪಿಯ ವಿರುದ್ಧ ಸುಳ್ಳು ಪ್ರಕರಣದ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಮು.ಮಾ 1 ಮತ್ತು 2 ನ್ನು ಆರೋಪಿಯಿಂದ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ 1 ಮತ್ತು 2 ಆರೋಪಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ರಾಸಾಯನಿಕ ಪರೀಕ್ಷೆಗೆ ಯಾವುದೇ ಮಧ್ಯವನ್ನು

ಕಳುಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಯಾವ ಮರೆಯಲ್ಲಿ ನಿಂತು ಆರೋಪಿಯನ್ನು ನೋಡಿರುತ್ತೀನಿ ಎಂದರೆ ಸಾಕ್ಷಿಯು ಸಾಲಬಾಳು ಬಸ್ ನಿಲ್ದಾಣದ ಹತ್ತಿರ ಸುಮಾರು 50 ಮೀ ಅಂತರದಿಂದ ನೋಡಿರುತ್ತೇವೆ ಎಂದು ನುಡಿಯುತ್ತಾರೆ. ಈ ಸಂಬಂಧ ನಾನು 65 ಬಿ ಪ್ರಮಾಣ ಪತ್ರ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.